INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -5, September-October, 2023,
PageNo,49-57
Peer -Reviewed, Refereed Journal

# ಸಂಗಮರ ಕಾಲದಲ್ಲಿ ಅಸ್ಥಿತ್ವದಲ್ಲಿದ್ದ ವೇಶ್ಯಾವಾಟಿಕೆ ಮತ್ತು ಸತಿಪದ್ಧತಿಯ ಶಾಸನಾವಲೋಕನ

**ವಿನುತ ವೈ.ಎಂ.**[1]

ವೇಶ್ಯಾವಾಟಿಕೆಯು ವಿಜಯನಗರದಲ್ಲಿ ಒಂದು ರಾಜಪೋಷಿತವಾದಂತಹ ವೃತ್ತಿಯಾಗಿದ್ದಿತು ಎಂದು ತಲೆ ತಗ್ಗಿಸಿ ಹೇಳುವುದಕ್ಕೆ ಅನೇಕ ಆಧಾರಗಳು ದೊರಕುತ್ತವೆ. ಪುರುಷನೊಂದಿಗೆ ಸ್ತ್ರೀಯೊಬ್ಬಳು ತಾತ್ಕಾಲಿಕವಾಗಿ ಮಾಡಿಕೊಳ್ಳುವ ಲೈಂಗಿಕ ಒಪ್ಪಂದವೇ ವೇಶ್ಯಾವೃತ್ತಿ, ಇದನ್ನು ಸಮಾಜದಲ್ಲಿ ಅಕ್ರಮ ಲೈಂಗಿಕ ಸಂಬಂಧವೆಂತಲೂ ಭಾವಿಸಲಾಗುತ್ತದೆ. ಪ್ರತಿಯೊಂದು ಸಮಾಜವೂ ಸಹ ಇದನ್ನು ಕೆಟ್ಟದೆಂದು ಹೇಳುತ್ತಲೇ ತಮ್ಮ ತಮ್ಮ ವ್ಯವಸ್ಥೆಯಲ್ಲಿ ಈ ಪದ್ಧತಿ ಉತ್ತೇಜನ ನೀಡಿದ ಸಂದರ್ಭದಲ್ಲಿ ಮಾರ್ಪಾಟು ಮಾಡಿಕೊಂಡೆ ಬರುತಲಿವೆ. ವಿಜಯನಗರದ ಕಾಲದಲ್ಲಿಯೇ ಅಲ್ಲದೆ ನಮ್ಮ ಪ್ರಾಚೀನ ಭಾರತದ ಚರಿತ್ರೆಯನ್ನು ಗಮನಿಸುವುದಾದರೂ, ರಾಜರ ಆಸ್ಥಾನದಲ್ಲಿಯೇ ಎಲ್ಲಾ ವೃತ್ತಿಗಳಿಗಿಂತಲೂ ಸ್ವಾಭಾವಿಕ ವೃತ್ತಿಯಾಗಿ ಈ ಪದ್ಧತಿ ಬೆಳೆದು ಬಂದಿರುವುದು ಕಂಡುಬರುತ್ತದೆ. ವಿಜಯನಗರದಲ್ಲಿ ವೇಶ್ಯಾಪದ್ಧತಿಯು ಆಳವಾಗಿ ಬೇರೂರಲು ಅನೇಕ ಕಾರಣಗಳನ್ನು ಕೊಡಬಹುದು ಪ್ರಮುಖವಾಗಿ

ಅ. ಬಡತನ

ಆ. ಅಜ್ಞಾನ

ಇ. ಆಸ್ಥಾನದ ನೃತ್ಯಗಾರ್ತಿಯರು ಹಾಗೆ ವೇಶ್ಯಾವೃತ್ತಿ

ಈ. ಯುದ್ಧದ ಸಂದರ್ಭದಲ್ಲಿ ವೇಶ್ಯಯರಿಗೂ ಸ್ಥಾನಮಾನ

ಉ. ಸಾಮಾಜಿಕ ಅಸ್ಥಿರತೆ, ಜಮೀನುದಾರಿಕೆ ಹಾಗೂ ಬದುಕಲು ಬೇರೆ
ಮಾರ್ಗವಿಲ್ಲದೆ ವೇಶ್ಯಾವೃತ್ತಿ ಕೈಗೊಂಡಿದ್ದು.[1]

ಭೋಗದ ತುತ್ತತುದಿಗೆ ತಲುಪಿದ್ದ ಅಂದಿನ ಸಮಾಜ ವೇಶ್ಯಾವಾಟಿಕೆಯನ್ನು ಕಾನೂನು ಬದ್ದಗೊಳಿಸಿತ್ತು. ವೈಭವದ ಹಾಗೂ ಹಣ ಸಂಪಾದನೆಯ ಮೂಲವೂ ಆಗಿದ್ದ ಇಂಥ ವೃತ್ತಿಗೆ ಅನೇಕರು

[1].**ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಹಾರಾಜ ಕಾಲೇಜು, ಮೈಸೂರು**

ತಮಗರಿವಿಲ್ಲದಂತೆಯೇ ತಮ್ಮ ಹೆಣ್ಣುಮಕ್ಕಳನ್ನು ಈ ದಂಧೆಗೆ ದೂಡಿದ್ದರು. ಅಂದಿನ ಗಂಡು ಸಮಾಜವು ತನ್ನ ಸ್ವಾರ್ಥಕ್ಕಾಗಿ ವೇಶ್ಯಾವೃತ್ತಿಗೆ ಅಂದು ಸಾಮಾಜಿಕ ಅನಿಷ್ಟವಾಗಿರಲಿಲ್ಲ. ಬದಲಾಗಿ ಇದೊಂದು ಶಾಸನಬದ್ದ ವೃತ್ತಿಯಾಗಿಯೇ ಮುನ್ನಣೆಗಳಿಸಿ ಹಾಸುಹೊಕ್ಕಾಗಿದ್ದುದು ಅನೇಕ ಆಕರಗಳಿಂದ ರುಜುವಾತು ಆಗಿದೆ.ಅನೇಕರು ದೇವದಾಸಿ ಪದ್ಧತಿಯ ಅನಂತರದಲ್ಲಿ ಬೀದಿಗಿಳಿದ ಪ್ರಸಂಗವೇ ವೇಶ್ಯಾವಾಟಿಕೆ ಎಂದಿದ್ದಾರೆ.ಮತ್ತೆ ಕೆಲವರು ಸತಿ ಹೋಗಲು ನಿರಾಕರಿಸಿದ್ದ ಹೆಣ್ಣುಮಕ್ಕಳು ಅನಿವಾರ್ಯವಾಗಿ ಈ ದಂಧೆಗೆ ದೂಡುವಂತೆ ಆಗಿತ್ತು ಎಂತಲೂ ಹೇಳಿದ್ದಾರೆ. ಇನ್ನಷ್ಟು ಉಲ್ಲೇಖಗಳು ಅಂದಿನ ಸಮಾಜದಲ್ಲಿನ ತಾಳಲಾರದ, ಹೊರಲಾರದ ತೆರಿಗೆ ಪದ್ಧತಿಗಳಿಂದ ಅನೇಕ ಸಮುದಾಯಗಳು ಕಂಡುಕೊಂಡ ಪರಿಹಾರವೂ ಹೌದು ಎನ್ನಲಾಗಿದೆ. ವಿವಾಹದ ಸಂದರ್ಭದಲ್ಲಿದ್ದ ಅನೇಕ ಖರ್ಚು ವೆಚ್ಚದ ಕಟ್ಟುಪಾಡುಗಳನ್ನು ಪ್ರಭುತ್ವ ಹೆಚ್ಚು ಬಿಗಿಗೊಳಿಸಿದ್ದು ಸಹ ಈ ಪದ್ಧತಿಗೆ ಕಾರಣವಾಯಿತು.[2]

ಬಾಲ್ಯವಿವಾಹ, ಸತಿಪದ್ಧತಿ, ಕನ್ಯಾಶುಲ್ಕದ ಹೊರೆಯಂತಹ ಅನಿಷ್ಟ ಪದ್ಧತಿಗಳು ಕೂಡ ಈ ವೇಶ್ಯಾವಾಟಿಕೆಗೆ ಕಾರಣವಾಗಿತ್ತು. ಅಂದಿನ ಈ ಪದ್ಧತಿ ಎಷ್ಟರಮಟ್ಟಿಗೆ ಮಹತ್ವ ಪಡೆದಿತ್ತು ಎಂದರೆ ವ್ಯಾಪಾರ ವಾಣಿಜ್ಯದ ವಹಿವಾಟಿನ ಪ್ರಕ್ರಿಯೆಯೋ ಎಂಬುವಷ್ಟರ ಮಟ್ಟಿಗೆ. ಏಕೆಂದರೆ ಭೇಟಿ ನೀಡಿದ ಅನೇಕ ವಿದೇಶಿಗರು ಈ ಕುರಿತು ರಸವತ್ತಾಗಿ ಚಿತ್ರಿಸದೆ ಬಿಟ್ಟಿಲ್ಲ. ಉದಾಹರಣೆಗೆ ಈ ಪದ್ದತಿಯಿಂದ ರಾಜಬೊಕ್ಕಸಕ್ಕೆ ಸಂದಾಯವಾಗುತ್ತಿದ್ದ ಆದಾಯವನ್ನು ಕುರಿತು ದೇಶಿ ವಿದೇಶಿ ಉಲ್ಲೇಖಗಳನ್ನೇ ಗಮನಿಸಬಹುದು. ವೇಶ್ಯಾವೃತ್ತಿಯು ಅಂದು ಎಷ್ಟು ಶ್ರೀಮಂತವಾಗಿತ್ತು ಎನ್ನುವಂಥ ಕಲ್ಪನೆಯೇ ಊಹೆಗೆ ನಿಲುಕದ್ದು, ಅಬ್ದುಲ್ ರಜಾಕನಂತೂ ವಿಜಯನಗರದ ಹನ್ನೆರಡು ಸಾವಿರ ಸೈನಿಕರಿಗೆ ಸಂಬಳ ನೀಡಬಹುದಾಗಿತ್ತು ಎಂಬ ಲೆಕ್ಕವನ್ನೇ ನೀಡಿದ್ದಾನೆ. ರಜಾಕನು ಒಂದೆಡೆ ಪ್ರೌಡದೇವರಾಯನ ಕಾಲಾವಧಿಯನ್ನು ಕುರಿತು ಈ ದರಬ್‌ಖಾನೆಯ ಈ ವೇಶ್ಯಾಗೃಹಗಳು ಒಂದು ತರಹ ಅಂಗಡಿ ಬೀದಿಗಳಂತ್ತಿವೆ. ಯಾರು ಬೇಕಾದರೂ ಈ ಬೀದಿಗೆ ಒಂದು ತನಗೆ ಮೆಚ್ಚುಗೆಯಾದ ವೇಶ್ಯೆಯನ್ನು ಆರಿಸಿಕೊಂಡು ಅವಳೊಡನೆ ಕಾಲ ಕಳೆಯಬಹುದು ಎಂದು ಚಿತ್ರಿಸಿದ್ದಾನೆ.[3]

ವಿಜಯನಗರದ ಅರಸರು ಯುದ್ದ ಸಂದರ್ಭದಲ್ಲಿಯೂ ಸೈನಿಕ ಶಿಬಿರಗಳಲ್ಲಿ ವೇಶ್ಯಯರಿಗೂ, ಕನ್ಯೆಯರಿಗೂ ಪ್ರಮುಖ ಸ್ಥಾನ ಕಲ್ಪಿಸಿಕೊಡುತ್ತಿದ್ದರು. ಯುದ್ಧದ ಸಮಯದಲ್ಲಿ ಸೈನಿಕರು ಕೇಳುತ್ತಿದದು ಹೆಚ್ಚಿನ ಸಂಬಳವನ್ನಲ್ಲ, ಬದಲಿಗೆ ಮದುವೆಯಾಗದ ಹುಡುಗಿಯರನ್ನು ಈ ಕನ್ಯೆ ಹಾಗೂ ವೇಶ್ಯಯರುಗಳು ನೇರವಾಗಿ ರಣರಂಗದಲ್ಲಿ ಯುದ್ಧ ಮಾಡದಿದ್ದರೂ ಸಹ ಸೈನಿಕರನ್ನು ಯುದ್ಧದಲ್ಲಿ ವೀರಾವೇಶದಿಂದ ಹೋರಾಡುವಂತೆ ಹುರುದುಂಬಿಸುವ ಕಾಯಕ ಮಾಡುತ್ತಿದ್ದರು. ಈ ಯುವತಿಯರ ಮೇಲಿನ ಆಸೆಗಾಗಿ ಬೇರೆ ಸಾಮಂತ ರಾಜ್ಯಗಳಿಂದಲೂ ಶ್ರೀಮಂತರು, ಸರದಾರರು ಬಂದು ರಾಜನ

ಸೈನ್ಯವನ್ನು ಸೇರಿಸಿಕೊಳ್ಳುತ್ತಿದ್ದರು. ಪ್ರತಿಯೊಬ್ಬ ಸಾಮಂತ ಹಾಗೂ ಪಾಳೇಗಾರನೂ ಸಹ ಏಳೆಂಟು ಮುದ್ದು ಯುವತಿಯರನ್ನು ತಮ್ಮ ಸೇವೆಗೆ ಸೇರಿಸಿಕೊಳ್ಳುತ್ತಿದ್ದರು. ಇನ್ನೂ ಕೆಲವು ವೇಶ್ಯೆಯರಿಗೆ ರಾಜನ ಬೊಕ್ಕಸದಿಂದ ಸಂಬಳ ದೊರೆಯುತಿತ್ತು ಎಂಬ ಬಾರ್ಬೋಸನ ಹೇಳಿಕೆಯು ಯುದ್ಧಗಳು ಕೂಡ ವಿಜಯನಗರದಲ್ಲಿ ವೇಶ್ಯಾವೃತ್ತಿಯ ವೃದ್ಧಿಗೆ ಮೂಲಕಾರಣವಾಗಿತ್ತೆಂಬುದನ್ನು ಸೂಚಿಸುತ್ತದೆ. ಮದುವೆಯಾಗದ ಇಂತಹ ಯುವತಿಯರು ಯುದ್ಧರಂಗದಿಂದ ಬದುಕಿ ಬಂದರೆ ಅವರು ಮುಂದೆ ಅನುಸರಿಸಬೇಕಾಗಿದ್ದದ್ದು ವೇಶ್ಯಾವೃತ್ತಿಯೊಂದನ್ನೇ ಯೋಧರು, ಸರದಾರರು ಶ್ರೀಮಂತರುಗಳು ಸೈನ್ಯದಲ್ಲಿ ಬಂದು ಸೇರಿಕೊಳ್ಳುತ್ತಿದ್ದುದ್ದು ಯುವತಿಯರಿಗಾಗಿಯೇ ಹೊರತು ಹೋರಾಡುವುದಕ್ಕಲ್ಲ. ಈ ಸಮಯದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ವಿಜಯನಗರದ ಸೈನಿಕರಲ್ಲಿಯೇ ಯುವತಿಯರಿಗಾಗಿ ಅಂತಃಕಲಹ ಉಂಟಾಗಿ ಸಾಮ್ರಾಜ್ಯದ ಐಕ್ಯತೆಗೆ ಭಂಗ ತಂದುಕೊಂಡ ಸಂದರ್ಭಗಳು ಅನೇಕವಿದೆ.[4]

ವೇಶ್ಯೆಯರಲ್ಲಿ ಮುದುರಾದಿಕೊತ್ಸವಂ (ಕನ್ನಡಿಯನ್ನು ತೋರಿಸುವುದು) ಅಂದಿನ ದಿನಗಳಲ್ಲಿ ಅಸ್ತಿತ್ವದಲ್ಲಿತ್ತು.ಈ ಆಚರಣೆಯು ಒಬ್ಬ ಕನ್ಯೆಯು ವೇಶ್ಯಾವೃತ್ತಿಯನ್ನು ಆರಂಭಿಸಲು ಒಂದು ಆರಂಭದ ಹಂತವಾಗುತಿತ್ತು. ಇದನ್ನು ಚೈತ್ರಮಾಸದ ಪೌರ್ಣಿಮೆಯ ದಿನದಂದು ಆಚರಿಸಲಾಗುತಿತ್ತು. ಆ ದಿವಸದಂದು ಅವರಿಗೆ ಸೇರಿದ ಎಲ್ಲ ಸಂಬಂಧಿಕರನ್ನು ಆಹ್ವಾನಿಸಲಾಗುತಿತ್ತು. ಹುಡುಗಿಯನ್ನು ತೋರಿಸಲಾಗುತಿತ್ತು. ಕನ್ನಡಿಯನ್ನು ವೇಶ್ಯೆಯರು ಮಹಾಲಕ್ಷ್ಮಿ ಎಂದು ಪರಿಗಣಿಸಿದ್ದರು. ತಂದೆಯು ಮಂತ್ರವನ್ನು ಹೇಳುತ್ತಿದ್ದನು. ಇದು ಅವನು ಆಶೀರ್ವಾದಗಳನ್ನು ನೀಡುತ್ತಿದುದ್ದನ್ನು ಸೂಚಿಸುತ್ತದೆ.ಈ ಆಶೀರ್ವಾದಗಳು ಉತ್ತಮ ಪಾಂಡಿತ್ಯ ಹಾಗೂ ಸಂಪತ್ತು ಪ್ರಾಪ್ತವಾಗಲೆಂದು ಹರಸುತ್ತಿದ್ದವು. ಈ ಆಚರಣೆಯನ್ನು ಪ್ರತಿ ವೇಶ್ಯೆಯ ಹುಡುಗಿಯು ತನ್ನ ಪ್ರಾಯಕ್ಕೆ ಬಂದಾಗ ಅನುಸರಿಸಲಾಗುತಿತ್ತು.[5]

ಅಂದಿನ ವೇಶ್ಯಾವೃತ್ತಿಯು ವಿಜಯನಗರದ ಸಾಮ್ರಾಜ್ಯದಲ್ಲಿ ಅನೇಕ ಸೂಳೆಯ ಬಜಾರುಗಳನ್ನೇ ನಿರ್ಮಿಸಿತ್ತು ಎನ್ನಲಾಗಿದೆ. ಜನ ನಿಬಿಡ ಹಾಗೂ ವ್ಯಾಪಾರ ವಹಿವಾಟಿನ ಕೇಂದ್ರ ತಾಣಗಳೂ ಆಗಿದ್ದ ಬಜಾರುಗಳ ಬಗೆಗೆ ವಿದ್ವಾಂಸರಲ್ಲಿ ಒಂದೇ ಅಭಿಪ್ರಾಯವಿಲ್ಲ. ಆದರೆ ಇಂಥ ಬಜಾರುಗಳನ್ನು ಕುರಿತು ಪೇಯಿಸ್, ಬಾರ್ಬೋಸಾ, ನ್ಯೂನಿಜ್, ರಜಾಕ್ ಮೊದಲಾದವರು ಉಲ್ಲೇಖಿಸಿದ್ದಾರೆ. ದೇಶಿ ಹಾಗೂ ವಿದೇಶಿ ಬರಹಗಾರರ ಆಕರಗಳ ಹಿನ್ನಲೆಯಲ್ಲಿ ಸುಮಾರು ಏಳು ಬಜಾರುಗಳು ಅಂದು ಜೀವಂತವಾಗಿದ್ದುದರ ಬಗೆಗೆ ಚಿತ್ರಣವಿದೆ.ಅವುಗಳಲ್ಲಿ ವಿರೂಪಾಕ್ಷ (ಹಂಪಿ) ಬಜಾರು. ಪಾನ್‌ಸುಪಾರಿ ಬಜಾರು, ವಿಠ್ಠಲ ಬಜಾರು ಹಾಗೂ ವರದ ರಾಜಮ್ಮನ ಬಜಾರು, ಲಾಂಗ್‌ಹರ್ಸ್ಟ್‌ಥರದ ವಿದ್ವಾಂಸರು ಅಚ್ಯುತ ಬಜಾರನ್ನು ಸೂಳೆ ಬಜಾರು ಎಂದು ಕರೆದಿರುವುದರ ಬಗೆಗೆ ವಸುಂಧರಾ ಫಿಲಿಯೋಜಾ

ಎಸ್.ಶೆಟ್ಟರ್ ಅವರು ಅಲ್ಲಗಳೆದಿದ್ದಾರೆ. ಇಂಥ ಅನೇಕ ತಕರಾರುಗಳ ನಡುವೆಯೇ ಗಣಿಕೆಯರ ಅಥವಾ ಸೂಳೆಯರ ಬಜಾರುಗಳಂತೂ ಇದ್ದವು ಎಂಬುದಕ್ಕೆ ವಿದೇಶಿ ಆಕರಗಳೇ ಸಾಕ್ಷಿ. ಈ ಕುರಿತಂತೆ ಅಲ್ಲಿಯ ಆಡಂಬರ, ವೈಭವ ಭೋಗದ ಅನೇಕ ಅಂಶಗಳು ಪ್ರವಾಸಿಗರನ್ನು ಚಕಿತರನ್ನಾಗಿಸಿವೆ. ಈ ವೃತ್ತಿ ಅಂದಿನ ಸಮಾಜದ ಉಸಿರಾಗಿತ್ತು ಎಂಬುದಕ್ಕೆ ದೇಶಿಯ ಆಕರಗಳು ಸಮರ್ಥಿಸದೆ ಬಿಟ್ಟಿಲ್ಲ, ಕನಕದಾಸರಂತೂ ತಮ್ಮ ಮೋಹನ ತರಂಗಿಣಿಯಲ್ಲಿ ವೃದ್ಧ ವೇಶ್ಯೆಯರು ತಮ್ಮ ಮಕ್ಕಳಿಗೆ ಸೂಳೆ ನೀತಿಯನ್ನು ಬೋಧಿಸುತ್ತಿದ್ದರು ಎಂಬ ಅಂಶಗಳನ್ನು ಹೊರಗೆಡಹಿದ್ದಾರೆ. ಸಮಾಜದಲ್ಲಿನ ಇಂಥ ಅನಿಷ್ಟಕ್ಕೆ ಅಂದಿನ ಅನೇಕ ಶಿವಶರಣೆಯರು ತಕರಾರು ತೆಗೆದು ತಿದ್ದುವ ಪ್ರಯತ್ನಗಳನ್ನೂ ಮಾಡಿರುವುದುಂಟು, ಸ್ವತಃ ಅಂದಿನ ರಾಣಿ ಗಂಗಾದೇವಿಯು ಸಹ ತನ್ನ ಮಧುರಾವಿಜಯಂನಲ್ಲಿ ಇದನ್ನು ಪ್ರಸ್ತಾಪಿಸದೇ ಬಿಟ್ಟಿಲ್ಲ.[6]

ಅಂದಿನ ಶ್ರೀಮಂತ ವೇಶ್ಯೆಯರು ತಮ್ಮ ಮನೆಗಳಲ್ಲಿ ವೀಣೆ, ಕೊಳಲು, ಸಂಗೀತ ಲಹರಿಯನ್ನು ಸೃಷ್ಟಿಸುತ್ತಿದ್ದರು. ಕರ್ಪೂರದ ದೀಪಗಳು, ಸುಗಂಧ ಧೂಪಗಳು, ಸಂಗೀತಧಾರೆಗಳೆಂಬ ಬಂಧನಗಳು ಯಾವ ಪುರುಷನನ್ನು ಮನೆಯಿಂದ ಆಚೆ ಹೋಗುವ ಹಾಗೆ ಮಾಡುತ್ತಿರಲ್ಲಿಲ್ಲ. ವಿಜಯನಗರದ ಕೆಲವು ವೇಶ್ಯೆಯರು ಹಕ್ಕುಗಳನ್ನು ಪಡೆಯುವವರಾಗಿದ್ದರು. ಸ್ವತಃ ಅರಸರೇ ವೃತ್ತಿಪರ ಶಿಕ್ಷಣ ನೀಡಲು ವೃತ್ತಿಗಳನ್ನು ನೀಡುತ್ತಿದ್ದುದಕ್ಕೆ ಅನೇಕ ಸಾಕ್ಷಿಗಳಿವೆ. ನವರಾತ್ರಿಯ ಸಮಯದಲ್ಲಿ ವೇಶ್ಯೆಯರ ಕುಸ್ತಿಗಳೂ ನಡೆಯುತ್ತಿದ್ದವೆಂದು ಅಬ್ದುಲ್‌ರಜಾಕ್ ತಿಳಿಸಿದ್ದಾರೆ.[7]

ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ವೇಶ್ಯೆಯರೂ ಕೂಡ ತೆರಿಗೆಯನ್ನು ಸಲ್ಲಿಸುತ್ತಿದ್ದರು, ವೇಶ್ಯೆಯರು ನೀಡುತ್ತಿದ್ದ ತೆರಿಗೆಯ ರೀತಿ ನೀತಿಯನ್ನು ಅಬ್ದುಲ್ ರಜಾಕ್ ಈ ರೀತಿ ವಿವರಿಸುತ್ತಾನೆ.

ವಿಜಯನಗರದ ಏಳು ಕೋಟೆಗಳಲ್ಲಿ ಈ ರೀತಿಯ ಅನೇಕ ವೇಶ್ಯಾಗೃಹಗಳಿದ್ದವು. ಈ ವೇಶ್ಯಾಗೃಹಗಳ ಮೇಲೆ ಹಾಕಿದಂತಹ ತೆರಿಗೆಯಿಂದ ಬೊಕ್ಕಸಕ್ಕೆ ಹನ್ನೆರಡು ಸಾವಿರ ಫನ ಆದಾಯ ಬರುತ್ತದೆ. ಈ ಹಣವನ್ನು ಸೈನಿಕರಿಗೆ ಸಂಬಳವಾಗಿ ಕೊಡುತ್ತಿದ್ದರು ಎಂದು ಹೇಳಿರುವುದು ವೇಶ್ಯೆಯರ ಆದಾಯವನ್ನು ಸೂಚಿಸುತ್ತದೆ.[8]

ಹೀಗೆ ಸಂಗಮ ಅರಸರ ಆಳ್ವಿಕೆಯಲ್ಲಿಯೂ ಕೂಡ ವೇಶ್ಯಾವಾಟಿಕೆ ರಾಜಪೋಷಿತವಾಗಿ ನಡೆಯುತ್ತಿತ್ತು.

**ಸತಿಪದ್ಧತಿ**

ಪ್ರಾಚೀನ ಜನಾಂಗದವರು ಈ ಲೋಕದಂತಹ ಇನ್ನೊಂದು ಲೋಕವಿದೆಯೆಂದು ಬಹು ಧೃಡವಾಗಿ ನಂಬಿದ್ದರು.ವ್ಯಕ್ತಿ ಮಡಿದಾಗ ಅವನು ಪರಲೋಕಕ್ಕೆ ಹೋಗುವನೆಂದೂ, ಅಲ್ಲಿಯ ಭೋಗಕ್ಕೆ

ಇಲ್ಲಿಂದ ಅವನಿಗಿಷ್ಟವಾದ ವಸ್ತುಗಳನ್ನು ಕಳುಹಿಸಬೇಕೆಂದು ಭಾವಿಸಿದ್ದರು. ಬಹುಶಃ ಸಹಗಮನ ಪದ್ಧತಿಗೆ ಇದೇ ಮೂಲವಿರಬಹುದು ಅಥವಾ ತಾನು ಸತ್ತ ಮೇಲೆ ತನ್ನ ಪ್ರೇಯಸಿಯು ಇನ್ನೊಬ್ಬನ ವಶವಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೂ ಕಾರಣವಿರಬಹುದು.ಪತಿಯ ಜೊತೆಯಲ್ಲಿ ಅವನ ವಿಧನೆಯನ್ನು ಸುಡುವ ಪದ್ಧತಿಯು ಪ್ರಾಚೀನ ಭಾರತದಲ್ಲಿ ಮಾತ್ರವಲ್ಲ, ಪ್ರಾಚೀನ ಗ್ರೀಕ್, ಜರ್ಮನ್ ಮುಂತಾದ ಯುರೋಪ್ ಮತ್ತು ಪಶ್ಚಿಮ ಏಷ್ಯಾ ಜನಾಂಗಗಳಲ್ಲಿಯೂ ಇದ್ದಿತು. ವೈದಿಕ ಯುಗದಲ್ಲಿ ಸಹಗಮನ ಪದ್ಧತಿಯು ಆಚರಣೆಯಲ್ಲಿರಲಿಲ್ಲ. ಅಥರ್ವವೇದದ ಕಾಲದಲ್ಲಿ ವಿಧವೆಯು ಗಂಡನ ಶವದ ಪಕ್ಕದಲ್ಲಿ ಮಲಗಿಕೊಳ್ಳುತ್ತಿದ್ದಳು. ಅವಳನ್ನು ಉಳಿದವರು ಕೆಳಗಿಳಿದು ಬಾ ಎಂದು ಕರೆದು ತನ್ನ ಮಕ್ಕಳು ಮತ್ತು ಐಶ್ವರ್ಯದೊಡನೆ ಸುಖವಾಗಿ ಬಾಳಲೆಂದು ಪ್ರಾರ್ಥನೆ ಮಾಡುತ್ತಿದ್ದರು.[9]

ದಕ್ಷಿಣ ಭಾರತದಲ್ಲಿ ಕ್ರಿ.ಶ 10ನೇ ಶತಮಾನದವರೆಗೆ ಸಹಗಮನ ಪದ್ಧತಿಯು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಕರ್ನಾಟಕದಲ್ಲಿ ಸಹಗಮನದ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಬಹುಶಃ ಕ್ರಿ.ಶ ಸುಮಾರು 400 ಸೊರಬ ತಾಲ್ಲೂಕಿನ ಶಾಸನ.[10]

ವಿಜಯನಗರದ ಕಾಲದಲ್ಲಿ ಸತಿಸಹಗಮನ ಪದ್ಧತಿಯು ಮೂಲ ದಾಖಲೆಗಳಿಂದ ವ್ಯಾಪಕವಾಗಿ ಕಂಡುಬರುತ್ತದೆ. ಅಂದಿನ ಪ್ರಭುತ್ವ ಕೇಂದ್ರಿತ ವ್ಯವಸ್ಥೆಯಲ್ಲಿ ಹಾಗೂ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಕೇವಲ ಉಪಭೋಗದ ವಸ್ತುವನ್ನಾಗಿಸಿಕೊಂಡಿರುವುದರ ಪ್ರತೀಕವಾಗಿ ಇದು ಗೋಚರಿಸುತ್ತದೆ. ಸತಿಯು ಸಹಗಮನವಾಗುತ್ತಿದ್ದದ್ದು ಎರಡು ರೀತಿಯಲ್ಲಿ,

**ಅ. ಸಹಗಮನ :** ಅಂದರೆ ಗಂಡ ಸತ್ತರೆ ಅವನ ಜೊತೆಯಲ್ಲಿಯೇ ಜೀವಂತವಾಗಿ ಚಿತೆಗೆ ಅಥವಾ ಊಳುವುದಾದರೆ ಜೀವಂತವಾಗಿ ಸಮಾಧಿ ಮಾಡಿಕೊಳ್ಳುವುದು ಇದಕ್ಕೆ ಸಹಗಮನ ಎಂದು ಕರೆಯಲಾಗಿದೆ.

**ಆ. ಅನುಗಮನ :** ಗಂಡನು ಎಲ್ಲೋ ದೂರದಲ್ಲಿ ಸತ್ತರೆ ಅದು ಯುದ್ಧ ರಂಗದಲ್ಲಾಗಬಹುದು ಅಥವಾ ಬೇಟೆಯಾಡುವ ಸಮಯದಲ್ಲಿ ಮರಣ ಹೊಂದಿದರೆ ಗಂಡನನ್ನು ನೆನೆದುಕೊಂಡು ಬೆಂಕಿಯಲ್ಲಿ ಜೀವ ಅರ್ಪಣೆ ಮಾಡಿಕೊಳ್ಳುವ ಕ್ರಿಯೆಗೆ ಅನುಗಮನ ಎಂತಲೂ ಕರೆಯಲಾಗುತಿತ್ತು.

ವಿಜಯನಗರ ಸಾಮ್ರಾಜ್ಯದಾದ್ಯಂತ ಇದಕ್ಕೆ ಸಂಬಂಧಿಸಿದ ಅನೇಕ ಶಿಲ್ಪಗಳು, ಶಾಸನಗಳು ದೊರಕುತ್ತವೆ. ಸತಿಸಹಗಮನವು ಬೆಂಕಿಗೆ ಹಾರಿ ಜೀವ ಬಿಡುವ ರೂಪ ಒಂದಾದರೆ, ಜೀವಂತವಾಗಿ ಸಮಾಧಿ ಮಾಡಿಸಿಕೊಳ್ಳುವುದು ಮತ್ತೊಂದಾಗಿತ್ತು. ಕೆಲವು ಕಡೆ ನೀರಿಗೆ ಹಾರುವುದು ಹಾಗೂ ಎತ್ತರದ

ಪ್ರದೇಶಗಳಿಂದ ಕಮರಿಗಳಿಗೆ ಹಾರಿ ಜೀವ ಬಿಡುವ ಪದ್ಧತಿಯೂ ಇತ್ತೆಂದು ಪ್ರವಾಸಿಗರ ವರದಿಗಳಲ್ಲಿ ದಾಖಲಾಗಿರುವುದು ಕಂಡುಬರುತ್ತದೆ.

ಸಂಗಮ ವಂಶದ ಅರಸ ಎರಡನೇ ದೇವರಾಯನ ಆಳ್ವಿಕೆ ಕಾಲದಲ್ಲಿ ನಿಕೋಲೋ ಡಿ ಕೌಂಟಿ ವಿಜಯನಗರಕ್ಕೆ ಭೇಟಿ ನೀಡಿದಾಗ ಇಲ್ಲಿನ ಸತಿಪದ್ಧತಿ ಬಗ್ಗೆ ಹೀಗೆ ಹೇಳಿದ್ದಾನೆ. ಬಿಜನೆಗಾಲಿಯಾ (ವಿಜಯನಗರ) ನಿವಾಸಿಗಳು ತಮ್ಮ ಇಚ್ಛೆ ಬಂದಷ್ಟು ಜನ ಹೆಂಡತಿಯರನ್ನು ಮದುವೆಯಾಗುತ್ತಾರೆ.ಗಂಡಸು ಸತ್ತರೆ ಹೆಂಡತಿಯರೆಲ್ಲ ಚಿತೆಯಲ್ಲಿ ಬಿದ್ದು ಸಾಯುತ್ತಾರೆ. ಇವರಲ್ಲಿ ಎರಡು ಮೂರು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮ ಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇನೆಂಬ ವಾಗ್ದಾನ ಮಾಡಿ ರಾಜನ ಕೈ ಹಿಡಿದಿರುತ್ತಾರೆ.[11] ವಿಜಯನಗರದ ರಾಜಧಾನಿಯಲ್ಲಿ ಬ್ರಾಹ್ಮಣ ಸ್ತ್ರೀಯರು ಸತಿ ಹೋಗುತ್ತಿದ್ದರೆಂಬುದನ್ನು ಕುರಿತು ಇಟಲಿಯ ನಿಕೋಲೋ ಡಿ ಕೌಂಟಿ ತನ್ನ ವರದಿಯಲ್ಲಿ ವಿವರಿಸಿದ್ದಾನೆ. ಹಾಗೆಯೇ ಜೈನ ಧರ್ಮದ ಅನುಯಾಯಿಗಳು ಸತಿ ಪದ್ಧತಿಯನ್ನು ಸಾಮ್ರಾಜ್ಯದ ಇತರ ಕಡೆಗಳಲ್ಲಿ ಆಚರಿಸುತ್ತಿದದ್ದು ಸಮಕಾಲೀನ ಸತಿ ಆಚರಿಸಿದ ಮಾಹಿತಿ ದೊರೆಯುವುದಿಲ್ಲ.[12]

ಕ್ಯಾಂಬೆಯ ಪದ್ಧತಿಗಳ ಬಗ್ಗೆ ಮಾತನಾಡುತ್ತಾ ನಿಕೋಲೋಡಿ ಕಾಂಟಿಯು ಹೀಗೆ ಹೇಳುತ್ತಾನೆ. ಒಬ್ಬ ಹಿಂದೂ ಅನೇಕ ಪತ್ನಿಯರನ್ನು ಹೊಂದಿರುತ್ತಿದ್ದನು ಹಾಗೂ ಅವನ ಮರಣಾನಂತರ ಎಲ್ಲರೂ ಭಸ್ಮವಾಗುತ್ತಿದ್ದರು. ಈ ಸ್ಥಳಗಳಲ್ಲಿ ಇವನು ಸತಿಯನ್ನು ನಿಖರವಾಗಿ ಹಾಗೂ ನಿರ್ದಿಷ್ಟವಾಗಿ ವಿವರಿಸಿದ್ದಾನೆ. ಇವನು ಕ್ಯಾಂಬೆಯಲ್ಲಿ ಈ ರೀತಿ ಬರೆದನು.ಅಲ್ಲಿ ಒಂದು ಪದ್ಧತಿಯಂತೆ ನಿರ್ದಿಷ್ಟ ಭೂಮಿ ಇರುತ್ತಿತ್ತು.ಅವಳ ಗಂಡನು ಸತ್ತನಂತರ ಆ ಸ್ಥಳದಲ್ಲಿ ಒಂದು ದೊಡ್ಡ ಹೊಂಡವಿರುತ್ತಿದ್ದು ಅದರಲ್ಲಿ ಸೌದೆಯನ್ನು ತುಂಬಿರುತ್ತಿದ್ದರು. ಗಂಡನ ದೇಹವನ್ನು ಅದರ ಮೇಲಿಟ್ಟು ಬೆಂಕಿಯನ್ನು ಹಚ್ಚಿಸಿದ ಅನಂತರ ಅವಳು ತನ್ನ ಸ್ವ ಇಚ್ಛೆಯಿಂದ ಚಿತೆಗೆ ಧುಮುಕುತ್ತಿದ್ದಳು ಹಾಗೂ ಇಬ್ಬರು ಸುಟ್ಟು ಭಸ್ಮವಾಗುತ್ತಿದ್ದರು.ಆದರೆ ಉನ್ನತ ಕುಲದ ನಾರಿಯೊಬ್ಬಳು ತಕ್ಷಣವೇ ಧುಮುಕುತ್ತಿರಲಿಲ್ಲ. ಅದಕ್ಕೂ ಮುನ್ನ ಹಲವಾರು ಪೂಜಾದಿ ಕಾರ್ಯಗಳನ್ನು ಮುಗಿಸಿದ ಅನಂತರವೇ ಚಿತೆಯನ್ನು ಹಾಯುತ್ತಿದ್ದಳು. ಅವಳು ಮಾಡುತ್ತಿದ್ದ ಕಾರ್ಯಗಳೆಂದರೆ ಸಂಗೀತ, ಹಾಡುಗಾರಿಕೆ, ನೃತ್ಯವನ್ನೇರ್ಪಡಿಸುವುದು, ಭೋಜನವನ್ನೇರ್ಪಡಿಸಿದ ಅನಂತರ ಅವಳ ಬಳಿ ಇದ್ದ ಎಲ್ಲ ಆಭರಣಗಳಿಂದ ಸಿಂಗಾರಗೊಳ್ಳುತ್ತಿದ್ದಳು ಹಾಗೂ ಮಿಕ್ಕ ಆಸ್ತಿಯನ್ನು ಅವಳ ಗಂಡ ಮಕ್ಕಳು ಸಂಬಂಧಿಕರು ಹಾಗೂ ಸ್ನೇಹಿತರಿಗೆ ಹಂಚುತ್ತಿದ್ದಳು. ಅನಂತರ ಬೂದುಬಣ್ಣದ ಕುದುರೆಯನ್ನೇರಿ ಆ ಚಿತೆಯ ಪ್ರದೇಶವನ್ನು ತಲುಪುವವರೆಗೂ ಬೀದಿಯಲ್ಲಿ ಮೆರೆವಣಿಗೆ ಹೋಗುತ್ತಿದ್ದಳು. ಆ ಸ್ಥಳವನ್ನು ತಲುಪಿದ ಅನಂತರ ಅವಳು ತನ್ನ ಉಡುಪನ್ನು ಕಳಚಿ ಕೇವಲ ಸೊಂಟದಿಂದ ಕೆಳಕ್ಕೆ

ಮಾತ್ರ ಬಟ್ಟೆಯ ತುಂಡೊಂದನ್ನು ಧರಿಸುತ್ತಿದ್ದಳು.ಆ ಮೇಲೆ ಜನರನ್ನುದ್ದೇಶಿಸಿ ತಾನು ಚಿತೆಯನ್ನು ಪ್ರವೇಶಿಸುತ್ತಿರುವುದು ಬಲವಂತದಿಂದಲ್ಲ, ಆದರೆ ತನ್ನ ಗಂಡನ ಮೇಲೆ ಹೊಂದಿದ್ದ ಅನಂತ ಪ್ರೀತಿ ಹಾಗೂ ಅನುಪಮ ಪ್ರೇಮದ ದ್ಯೋತಕವಾಗಿ ಆತ್ಮಾಹುತಿ ಮಾಡಿಕೊಳ್ಳುತ್ತಿರುವುದಾಗಿ ಹೇಳುತ್ತಿದ್ದಳು. ಅನಂತರ ತನ್ನ ತಲೆಯ ಮೇಲೆ ಎಣ್ಣೆಯನ್ನು ಹಾಕಿಕೊಂಡು ಧಗಧಗನೆ ಉರಿಯುತ್ತಿರುವ ಕೆಂಡ ಕೆಂಪಾಗ್ನಿಯ ಕೆನ್ನಾಲಿಗೆ ಆಹುತಿಯಾಗುತ್ತಿದ್ದಳು.[13]

ಸಹಗಮನ ಪದ್ಧತಿಯನ್ನು ಯಾರು ಆಚರಿಸುತ್ತಿರಲಿಲ್ಲವೋ ಅವರನ್ನು ಕೀಳಾಗಿ ಕಾಣಲಾಗುತಿತ್ತು. ಹಾಗೂ ಅವರ ಸಂಬಂಧಿಕರು ಅವರ ತಲೆಯ ಕೂದಲನ್ನು ಬೋಳಿಸಿ ಅವರು ಅವರ ಕುಟುಂಬಗಳಿಗೆ ಒಂದು ಅವಮಾನ ಹಾಗೂ ಪಾಪಿಗಳೆಂದು ಓಡಿಸುತ್ತಿದ್ದರು. ಸತಿಪದ್ಧತಿಯನ್ನು ಯಾರು ಉಲ್ಲಂಘಿಸುತ್ತಾರೋ ಅವರು ತಲೆಬೋಳಿಸಿಕೊಳ್ಳುವುದನ್ನು ಒಂದು ಅಪರಾಧ ಎಂದು ಪರಿಗಣಿಸಲಾಗಿತ್ತು ವಿಧವೆಯಾಗಿ ಉಳಿಯುವುದು ಒಬ್ಬ ಮಹಿಳೆಗೆ ಅತ್ಯಂತ ಹೀನಾಯವಾದ ಸಂಗತಿಯಾಗಿತ್ತು. ಏಕೆಂದರೆ ಅವಳ ಪಾಪಗಳೇ ಅವಳ ಗಂಡನ ಸಾವಿಗೆ ಕಾರಣ ಎಂಬ ಅಭಿಪ್ರಾಯವನ್ನು ಜನರು ಹೊಂದಿದ್ದರು. ಅವ ಗಂಡನೊಂದಿಗೆ ಅವಳು ಸಾಯುವುದೊಂದೆ ಅವಳಿಗೆ ಅಂತಿಮ ಮಾರ್ಗ, ಈ ರೀತಿ ಮಾಡುವುದರಿಂದ ಅವಳು ಸ್ವರ್ಗ ಸೇರಬಹುದೆಂಬ ನಂಬಿಕೆಯೂ ಇತ್ತು.[14]

ಸಂಗಮ ವಂಶದ ಆಳ್ವಿಕೆ ಅವಧಿಯಲ್ಲಿಯೂ ಕೂಡ ಸತಿಸಹಗಮನ ಪದ್ಧತಿ ಆಚರಣೆಯಲ್ಲಿತ್ತು ಎಂಬುದಕ್ಕೆ ಹಲವು ಶಾಸನ ಆಧಾರಗಳು ದೊರೆಯುತ್ತವೆ. ಕ್ರಿ.ಶ 1362ರ ಶಾಸನವೊಂದು ದಾಖಲಿಸುವಂತೆ ದೇವಪ್ಪ ಹಾಗೂ ಅವನ ಪತ್ನಿ ಬಾಯಿಚಕ್ಕ ಇವರಿಬ್ಬರು ಸತಿಯನ್ನು ಆಚರಿಸಿದರು.ಕ್ರಿ.ಶ 1369ರ ಶಾಸನವೊಂದು ಹೇಳುವಂತೆ ಅರೂಹನ ಹಳ್ಳಿಯ ಮುಖ್ಯಸ್ಥನಾದ ಕೀರ್ತಿಯರಸನ ಮಗನಾದ ನಾಗರಸನ ಸ್ಮರಣಾರ್ಥವಾಗಿ ವೀರಗಲ್ಲೊಂದನ್ನು ಪ್ರತಿಷ್ಠಾಪಿಸಿಲಾಯಿತು. ಅವನ ಮೂವರು ಹೆಂಡತಿಯರಾದ ಬಾಯಿಚಕ್ಕ, ಬಾಯಿದೇವಿ ಮತ್ತು ಮಾದರಗೌಡಿ ಇವರು ಅವನೊಂದಿಗೆ ಸತ್ತಿರುವುದಾಗಿ ತಿಳಿದು ಬಂದಿದೆ. ನಾವುಕಗೌಡನ ಹೆಂಡತಿಯಾದ ದೇಮಾಯಿಯು ಅವಳ ಗಂಡ ನಾವುಕಗೌಡನ ಮರಣದ ಸಲುವಾಗಿ ಕ್ರಿ.ಶ 1383ರಲ್ಲಿ ದಾವಣಗೆರೆಯ ಬಳಿ ಸತಿ ಪದ್ಧತಿಯನ್ನು ಆಚರಿಸುವುದರ ಮೂಲಕ ಮಹಾಸತಿಯಾದಳು.[15]

ಕ್ರಿ.ಶ 1384ರ ಶಾಸನವೊಂದರ ಪ್ರಕಾರ ಮಲ್ಲಪ್ಪನ ಪತ್ನಿಯು ಸತಿ ಪದ್ಧತಿಯನ್ನು ಆಚರಿಸಿದಳು. ಕ್ರಿ.ಶ 1386ರಲ್ಲಿ ಹರಿಹರನ ಆಳ್ವಿಕೆಯಲ್ಲಿ ಬೋಮ್ಮಕ್ಕಳು ತನ್ನ ಪತಿ ಮಲೆಯಂದೂರಿನ ಜಾದವರ ಚೇಲಿ ಬಯಾಚಿಶೆಟ್ಟಿಯ ಸಾವಿನೊಂದಿಗೆ ಮಹಾಸತಿಯಾದಳು ಎಂದು ಒಂದು ಶಾಸನವು ಉಲ್ಲೇಖಿಸುತ್ತದೆ. ಕ್ರಿ.ಶ 1388ರ ಒಂದು ಶಾಸನವು ಮುತ್ತುಗ ಕುಪ್ಪೆಯ ಚಿಕ್ಕಗೌಡನ ಮಗನಾದ ಕೋವಿಕರ ದೇವಯ್ಯ

ನಾಯಕನು ಹಾವು ಕಚ್ಚಿ ಸತ್ತಾಗ ಆತನ ಹೆಂಡತಿ ಮುದ್ದನಕೇತಿಯು ಸೊರಬದಲ್ಲಿ ಸಹಗಮನವನ್ನು ಆಚರಿಸಿದಳೆಂದು ವಿವರಿಸುತ್ತದೆ.[16]

ಬೈಚಿ ನಾಯಕನು ಮಗನು ತೀರಿಕೊಂಡಾಗ ಆತನ ಹೆಂಡತಿಯು ಅವನ ಶವದೊಂದಿಗೆ ಕ್ರಿ.ಶ 1393ರಲ್ಲಿ ತಾನೂ ಬೆಂಕಿಗೆ ಆಹುತಿಯಾದಳು ಎಂದು ಒಂದು ಶಾಸನವು ತಿಳಿಸುತ್ತದೆ. ಕ್ರಿ.ಶ 1397ರಲ್ಲಿ ಒಂದು ಶಾಸನವು ಉಲ್ಲೇಖಿಸುವಂತೆ ಹರಿಯಗೌಡನು ಹರಿಹರ ದೇವಾಲಯದ ದಕ್ಷಿಣದ ಬಾಗಿಲಿನಲ್ಲಿ 1157ರಲ್ಲಿ ಕೇಶವದೇವರ ಸಮ್ಮುಖದಲ್ಲಿ ಲೋಪದ ಬಳಿ ಸೂರ್ಯಸ್ತದ ಅನಂತರ ಸ್ವರ್ಗಕ್ಕೆ ಹೋದನು.ಅವನ ಹೆಂಡತಿಯಾದ ಲಕ್ಕಣಾಯಿಯು ಚಿತೆಯನ್ನು ಪ್ರವೇಶಿಸಿದಳು. ಹಾಗೂ ದೇವಲೋಕವನ್ನು ತಲುಪಿದಳು. ಹನ್ನೊಂದನೆಯ ದಿವಸದಂದು ಓಸಣ ಹರಿಯಗೌಡನ ತಮ್ಮ ಹಾಗೂ ಮಗ ಇಬ್ಬರು ಒಂದು ಕಲ್ಲನ್ನು ನೆರವೇರಿಸಿದರು. ಕೊಂಗುವ ಚಿಲಾದರ ಬೊಮ್ಮಯ್ಯನು ಕಲಾಯೂರು ಹಳ್ಳಿಯಲ್ಲಿ ಗೋವುಗಳ ಆಕ್ರಮಣದಲ್ಲಿ ಹೋರಾಡಿ ಮಡಿದನು. ಆತನ ಪತ್ನಿ ಚಿಯಕ್ಕಳು ಅವನೊಂದಿಗೆ ಕ್ರಿ.ಶ 1399ರಲ್ಲಿ ಹೋದಳೆಂದು ಒಂದು ಶಾಸನವು ತಿಳಿಸುತ್ತದೆ.[17]

ಕ್ರಿ.ಶ 1410ರ ಶಾಸನವೊಂದು ದಾಖಲಿಸುವಂತೆ ಜಕ್ಕ ಗೌಡನ ಮಗ ನಾಗಪ್ಪನು ಸ್ವರ್ಗಸ್ತನಾದನು. ಆತನ ಹೆಂಡತಿ ತರಗಿಗೌಡಿಯು ಸಹಗಮನವನ್ನು ಆಚರಿಸಿದಳು. ಕ್ರಿ.ಶ 1403ರ ಶಾಸನವೊಂದು ಹೇಳುವಂತೆ ಮುಂದೆ ಗಮುಂಡನು ಸತ್ತನು.ಸೋಯನ ಮಗನಾದ ವೀರ, ನಾರ, ಉರಿವಣ್ಣ, ಬೊಮ್ಮನಾಯಕನ ಮಗಳಾದ ಕಾಳದೇವಿ ಇವರು ಸಹಗಮನವನ್ನು ಆಚರಿಸಿದರು. ಕ್ರಿ.ಶ 1403ರ ಶಾಸನವೊಂದು ಉಲ್ಲೇಖವನ್ನು ನೀಡುವಂತೆ ಕುರನಿವಕನ ಮಗನಾದ ಸಾಕಾಣ್ಣ ಹಾಗೂ ಅವನ ಹೆಂಡತಿ ದೇವನಕತ್ತಿಯರಿಬ್ಬರು ಸ್ವರ್ಗಸ್ತರಾದರು. ಮೇಚಿಗೌಡಿಯು ಕ್ರಿ.ಶ 1404ರಲ್ಲಿ ತನ್ನ ಗಂಡ ಗುಟ್ಟಿಯ ಕುಂದನಾಡು ಜಿಲ್ಲೆಯ ಕೇಳಡಿಯ ಹರಿಯಗೌಡನೊಂದಿಗೆ ಚಿತೆಯನ್ನೇರುವುದರೊಂದಿಗೆ ಮಹಾಸತಿಯಾದಳು.[18] ದೇವರಾಯನ ಆಳ್ವಿಕೆಯಲ್ಲಿ ಮೇಗರವಳ್ಳಿ ಗ್ರಾಮಕ್ಕೆ ಸೇರಿದ ನಾನಕ್ಕನೆಂಬುವಳು ಆಗಸ್ಟ್ 17 ಕ್ರಿ.ಶ. 1416ರಂದು ಸತಿಯನ್ನು ಆಚರಿಸಿದಳು. ಒಂದು ಶಾಸನವು ಹೇಳುವಂತೆ ಕ್ರಿ.ಶ 1417ರಲ್ಲಿ ದೇವರಾಯನ ಆಜ್ಞೆಯಂತೆ ಗವೆಗುತ್ತಿ ರಾಜ್ಯವು ವಿರೂಪ ದಂಡನಾಯಕನಡಿಯಲ್ಲಿತ್ತು.

ಹೀಗೆ ಶಾಸನಾಧಾರಗಳು ಈ ಮೇಲಿನಂತೆ ಸತಿ ಪದ್ಧತಿಯ ವ್ಯಾಪಕ ಆಚರಣೆ ಸಂಗಮ ಅರಸರ ಆಳ್ವಿಕೆ ಅವಧಿಯಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ ಬೇರೂರಿತ್ತು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ.

**ಅಡಿ ಟಿಪ್ಪಣಿ :**

1. ಚಿನ್ನಸ್ವಾಮಿ ಸೋಸಲೆ ಎನ್, ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಸಾಂಸ್ಕೃತಿಕ ಚರಿತ್ರೆ. ಪುಟ ಸಂಖ್ಯೆ 111
2. ಮೋಹನಕೃಷ್ಣ ರೈ ಕೆ, ವಿಜಯನಗರ ಚರಿತ್ರೆ ಬರವಣಿಗೆ; ಮರು ಓದು, ಪುಟ ಸಂಖ್ಯೆ 175
3. ಅದೇ, ಪುಟ ಸಂಖ್ಯೆ 176
4. ಚಿನ್ನಸ್ವಾಮಿ ಸೋಸಲೆ ಎನ್, ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಸಾಂಸ್ಕೃತಿಕ ಚರಿತ್ರೆ. ಪುಟ ಸಂಖ್ಯೆ 112
5. ಸರಸ್ವತಿ ಎನ್. ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪುಟ ಸಂಖ್ಯೆ 143–144
6. ಮೋಹನಕೃಷ್ಣ ರೈ ಕೆ, ವಿಜಯನಗರ ಚರಿತ್ರೆ ಬರವಣಿಗೆ; ಮರು ಓದು, ಪುಟ ಸಂಖ್ಯೆ 176
7. ಚಿನ್ನಸ್ವಾಮಿ ಸೋಸಲೆ ಎನ್, ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಸಾಂಸ್ಕೃತಿಕ ಚರಿತ್ರೆ. ಪುಟ ಸಂಖ್ಯೆ 114
8. ಅದೇ, ಪುಟ ಸಂಖ್ಯೆ 115
9. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ಸಂಖ್ಯೆ 346
10. ಅದೇ, ಪುಟ ಸಂಖ್ಯೆ 350
11. ಗೋಪಾಲ್ ಆರ್, ವಿಜಯನಗರ ಅಧ್ಯಯನ ಸಂಪುಟ–11, ಪುಟ ಸಂಖ್ಯೆ 432
12. ಚಿನ್ನಸ್ವಾಮಿ ಸೋಸಲೆ ಎನ್, ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಸಾಂಸ್ಕೃತಿಕ ಚರಿತ್ರೆ. ಪುಟ ಸಂಖ್ಯೆ 118
13. ಸರಸ್ವತಿ ಎನ್, ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪುಟ ಸಂಖ್ಯೆ 136
14. ಅದೇ, ಪುಟ ಸಂಖ್ಯೆ 55
15. ಅದೇ, ಪುಟ ಸಂಖ್ಯೆ 56
16. ಅದೇ, ಪುಟ ಸಂಖ್ಯೆ 37
17. ಅದೇ, ಪುಟ ಸಂಖ್ಯೆ 138
18. ಅದೇ, ಪುಟ ಸಂಖ್ಯೆ 138